| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 54 ]
Total No. of Questions : 54 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24
[ Total No. of Printed Pages : 24

**ಸಂಕೇತ ಸಂಖ್ಯೆ : 62-K**
**Code No. : 62-K**

# ವಿಷಯ : ತೃತೀಯ ಭಾಷೆ — ಕನ್ನಡ
# Subject : Third Language — KANNADA

ದಿನಾಂಕ : 13. 04. 2012 ]
ಸಮಯ : ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-15 ರವರೆಗೆ ]
ಪರಮಾವಧಿ ಅಂಕಗಳು : 100 ]

[ Date : 13. 04. 2012
[ Time : 10-30 A.M. to 1-15 P.M.
[ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 12. | | 23. | | 34. | | 45. | |
| 2. | | 13. | | 24. | | 35. | | 46. | |
| 3. | | 14. | | 25. | | 36. | | 47. | |
| 4. | | 15. | | 26. | | 37. | | 48. | |
| 5. | | 16. | | 27. | | 38. | | 49. | |
| 6. | | 17. | | 28. | | 39. | | 50. | |
| 7. | | 18. | | 29. | | 40. | | 51. | |
| 8. | | 19. | | 30. | | 41. | | 52. | |
| 9. | | 20. | | 31. | | 42. | | 53. | |
| 10. | | 21. | | 32. | | 43. | | 54. | |
| 11. | | 22. | | 33. | | 44. | | × | |
| | | | | | | | | ***Total Marks*** | |

| **Total Marks in words** | | **Grand Total** | |
|---|---|---|---|

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಿ, ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :

$15 \times 1 = 15$

1. ಭರತನು ತನ್ನ ತಾಯಿಯನ್ನು ಹುಡುಕಿಕೊಂಡು ಹೊರಟನು. — ಈ ವಾಕ್ಯದಲ್ಲಿರುವ ಅಂಕಿತ ನಾಮಪದ

(ಎ) ಭರತ (ಬಿ) ತಾಯಿ

(ಸಿ) ಹುಡುಕಿಕೊಂಡು (ಡಿ) ಹೊರಟನು

*ಉತ್ತರ :* ____________________

2. ಹೌದು ಮಹಾಪ್ರಭು, ಯಾರಲ್ಲಿ
ಈ ವಾಕ್ಯದ ಕೊನೆಯಲ್ಲಿರಬೇಕಾದ ಲೇಖನ ಚಿಹ್ನೆ ಯಾವುದು ?

(ಎ) ಪೂರ್ಣವಿರಾಮ (ಬಿ) ಪ್ರಶ್ನಾರ್ಥಕ

(ಸಿ) ಉದ್ಧರಣ (ಡಿ) ಅಲ್ಪವಿರಾಮ

*ಉತ್ತರ :* ______________________________

3. ಹಸಿರು <u>ಬಣ್ಣಗಳಲ್ಲಿ</u> ಎಷ್ಟು ಬಗೆ ಎಂಬುದನ್ನು ಅಲ್ಲಿ ನೋಡಬೇಕು. ಅಡಿಗೆರೆ ಎಳೆದ ಪದದಲ್ಲಿರುವ ವಿಭಕ್ತಿ

(ಎ) ಪ್ರಥಮಾ (ಬಿ) ದ್ವಿತೀಯಾ

(ಸಿ) ಸಪ್ತಮೀ (ಡಿ) ಪಂಚಮೀ

*ಉತ್ತರ :* ______________________________

4. 'ಮನೆಯಲ್ಲಿ' ಈ ಪದವು ಯಾವ ಸಂಧಿಗೆ ಉದಾಹರಣೆಯಾಗಿದೆ ?

(ಎ) ಲೋಪ ಸಂಧಿ (ಬಿ) ಆದೇಶ ಸಂಧಿ

(ಸಿ) ಗುಣ ಸಂಧಿ (ಡಿ) ಆಗಮ ಸಂಧಿ

*ಉತ್ತರ :* ______________________________

5. 'ಅಚ್ಚು ಮುರಿದ ಹಾಳು ಬಂಡಿಯಂತಯ್ಯ' ಇಲ್ಲಿರುವ ಅಲಂಕಾರ

(ಎ) ಉಪಮಾ (ಬಿ) ರೂಪಕ

(ಸಿ) ದೃಷ್ಟಾಂತ (ಡಿ) ಉತ್ಪ್ರೇಕ್ಷೆ

*ಉತ್ತರ :* ______________________________

6. 'ಜನ್ಮ' ಈ ಪದದ ತದ್ಭವ ರೂಪ

(ಎ) ಜನುಮ (ಬಿ) ಹುಟ್ಟು

(ಸಿ) ಜಾನುಮ (ಡಿ) ಜನೂಮ

*ಉತ್ತರ :* ______________________________

7. ‘ಛಂದಸ್ಸಿ’ನಲ್ಲಿ ಲಘು ( U ) ಚಿಹ್ನೆಗೆ ಎಷ್ಟು ಮಾತ್ರೆಯ ಬೆಲೆಯಿದೆ ?

(ಎ) ಒಂದು (ಬಿ) ಎರಡು

(ಸಿ) ಮೂರು (ಡಿ) ನಾಲ್ಕು

ಉತ್ತರ : ______________________________

8. ‘ದ್ವಿರುಕ್ತಿ’ ಪದವನ್ನು ಗುರುತಿಸಿ

(ಎ) ಡವಡವ (ಬಿ) ಜುಳುಜುಳು

(ಸಿ) ಕೂಗಿದಾಕೂಗಿದಾ (ಡಿ) ಢಣಢಣ

ಉತ್ತರ : ______________________________

9. ‘ವಿಧವೆ’ — ಈ ಪದದ ಅನ್ಯಲಿಂಗ ರೂಪ

(ಎ) ವಿದುರ (ಬಿ) ವಿಧುರ

(ಸಿ) ವಿಧವಾ (ಡಿ) ವರ

ಉತ್ತರ : ______________________________

10. ‘ಬಾಗ್ಯ’ — ಈ ಪದದ ಶುದ್ಧರೂಪ

(ಎ) ಭಗ್ಯ (ಬಿ) ಭಾಗ್ಯ

(ಸಿ) ಬಾಗ್ಯಾ (ಡಿ) ಭಾಗ್ಯಾ

ಉತ್ತರ : ______________________________

11. ‘ನಿಜ’ ಇದರ ಸಮಾನಾರ್ಥಕ ಪದ

(ಎ) ಸತ್ಯ (ಬಿ) ಮಿಥ್ಯ

(ಸಿ) ನೈಜ (ಡಿ) ಸುಳ್ಳು

ಉತ್ತರ : ______________________________

12. 'ಬೆಟ್ಟದಾವರೆ' — ಈ ಸಂಧಿ ಪದವನ್ನು ಬಿಡಿಸಿ ಬರೆದಾಗ

(ಎ) ಬೆಟ್ಟದ + ತಾವರೆ (ಬಿ) ತಾವರೆಯ + ಬೆಟ್ಟ

(ಸಿ) ಬೆಟ್ಟ + ತಾವರೆ (ಡಿ) ಬೆಟ್ಟದಾ + ತವರೆ

ಉತ್ತರ : ____________________

13. ಅನುಕರಣಾವ್ಯಯ ಪದವನ್ನು ಗುರುತಿಸಿ

(ಎ) ಪಟಪಟನೆ (ಬಿ) ಮತ್ತೇಮತ್ತೆ

(ಸಿ) ಓಡೋಡಿ (ಡಿ) ನಕ್ಕೂನಕ್ಕು

ಉತ್ತರ : ____________________

14. 'ಆಗಮನ' ಇದರ ವಿರುದ್ಧಾರ್ಥಕ ಪದ

(ಎ) ಸಹಗಮನ (ಬಿ) ಗಮನ

(ಸಿ) ನಿರ್ಗಮನ (ಡಿ) ಜ್ಯೋತಿರ್ಗಮನ

ಉತ್ತರ : ____________________

15. 'ಕೊಂಡ್ಹೋಗು' — ಈ ಪದದ ಗ್ರಾಂಥಿಕ ರೂಪ

(ಎ) ಕೊಂಡು ಹೋಗು (ಬಿ) ಕೊಂಡುಕೊಂಡು ಹೋಗು

(ಸಿ) ಕೊಂಡುಕೊಳ್ಳು (ಡಿ) ಕೊಂಡು ಕೊಳ್ಳದಿರುವುದು

ಉತ್ತರ : ____________________

16. ‘ಅ’ ಪಟ್ಟಿಯಲ್ಲಿನ ವ್ಯಾಕರಣಾಂಶಗಳಿಗೆ ಹೊಂದುವ ಉದಾಹರಣೆಗಳನ್ನು ‘ಬ’ ಪಟ್ಟಿಯಿಂದ ಆರಿಸಿ, ಹೊಂದಿಸಿ ಬರೆಯಿರಿ : 5 × 1 = 5

| ಅ | | ಬ | |
|---|---|---|---|
| i) | ಧಾತು | ಅ) | ಮಗು |
| ii) | ಅನ್ಯದೇಶೀಯ | ಆ) | ನೋಡು |
| iii) | ಜೋಡಿನುಡಿ | ಇ) | ಅವನು |
| iv) | ಬಹುವಚನ | ಈ) | ಕುಣಿಯುತ್ತಾನೆ |
| v) | ಸರ್ವನಾಮ ಪದ | ಉ) | ಬೆಹನ್‌ಜೀ |
| | | ಊ) | ಮಕ್ಕಳು |
| | | ಋ) | ದೀನದಲಿತ |

*ಉತ್ತರಗಳು :* i) ____________________

ii) ____________________

iii) ____________________

iv) ____________________

v) ____________________

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

17. ಮೂರ್ತಿ ಚಿಕ್ಕದಾದರೂ ......................... .

____________________

18. ತುಂಬಿದ ಕೊಡ ......................... .

____________________

19. ‘ಹಡಗದ ಚಂದ’ ಪದ್ಯವನ್ನು ......................... ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.

____________________

20. ಭಾರತದ ರಾಷ್ಟ್ರಪಿತ ......................... .

____________________

21. ಬಿ.ವಿ. ಕಾರಂತರ ತಂದೆಯ ಹೆಸರು ......................... .

____________________

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $8 \times 1 = 8$

22. ಭರತ ಕುಮಾರನ ಕೂಗನ್ನು ಕೇಳಿದ ಬೆಂಕಿ ಏನೆಂದು ಹೇಳಿತು ?

______________________________________________

______________________________________________

23. ಬಿ.ವಿ. ಕಾರಂತರು ಕರ್ನಾಟಕದ ಯಾವ ಊರಿನಲ್ಲಿ ರೆಪರ್ಟರಿಯನ್ನು ಕಟ್ಟಿದರು ?

______________________________________________

______________________________________________

24. ಬಂಜರು ಭೂಮಿಯ ಸಾಗುವಳಿ ಅತ್ಯಗತ್ಯ ಎಂದು ಮೊದಲು ತೋರಿಸಿ ಕೊಟ್ಟವರು ಯಾರು ?

______________________________________________

______________________________________________

25. ಶಾಸ್ತ್ರೀಯವರ ಸೊಸೆ ಮಟಮಟ ಮಧ್ಯಾಹ್ನ ಏನನ್ನು ತರಲು ಹೊರಟಳು ?

______________________________________________

______________________________________________

26. ಹಡಗನ್ನು ಸೃಷ್ಟಿಸಿ ಸಾಗರದ ಮೇಲೆ ತೇಲಿ ಬಿಟ್ಟವರು ಯಾರು ?

______________________________________________

______________________________________________

27. ಯುಗಾದಿ ಬಂದು ಹೋದರು ಯಾರ ಬಸಿರು ತುಂಬಲಿಲ್ಲವೆಂದು ಹೊರೆಯಾಲ ದೊರೆ ಸ್ವಾಮಿಯವರು ಹೇಳಿದ್ದಾರೆ ?

______________________________________________

______________________________________________

28. ಯಾರ ಜನ್ಮ ದೊಡ್ಡದೆಂದು ಪುರಂದರದಾಸರು ಹೇಳಿದ್ದಾರೆ ?

________________________________________

________________________________________

29. ಪುರು ಪರಮೇಶನ ಹಿರಿಯ ಮಗನ ಹೆಸರೇನು ?

________________________________________

________________________________________

ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 15 × 2 = 30

30. ರಾಮಕೃಷ್ಣನು, ಹಸಿವು ಎಂದು ಮನೆಗೆ ಬಂದಾಗ ಗೌರಿ ಹೇಳಿದ್ದೇನು ?

________________________________________

________________________________________

________________________________________

________________________________________

________________________________________

________________________________________

________________________________________

________________________________________

31. ರಾಮಕೃಷ್ಣ ದಂಪತಿಗಳಲ್ಲಿ ಮೊದಲು ಯಾರು ಸತ್ತರೆಂದು ತಿಳಿಯಲು ತಿಮ್ಮರಸ ಮಾಡಿದ ಉಪಾಯವೇನು ?

32. ಕೇದಾರವನ್ನು ಏರುವ ದಾರಿಯ ಪ್ರಕೃತಿ ವೈಭವವನ್ನು ಸಂಕ್ಷೇಪವಾಗಿ ಬರೆಯಿರಿ.

33. ಪಂಚ ಪರ್ವತಗಳು ಎಲ್ಲಿವೆ ? ಅವು ಯಾವುವು ?

34. ಬಿ.ವಿ. ಕಾರಂತರಿಗೆ ಬಾಲ್ಯದಲ್ಲಿ ಸಿಕ್ಕ ಕಲಾ ಶ್ರೀಮಂತಿಕೆ ಎಂತಹದ್ದು ?

35. ತಗಡೂರು ರಾಮಚಂದ್ರರಾಯರನ್ನು 'ಭೋಟಾ ಗಾಂಧಿ' ಎಂದು ಏಕೆ ಕರೆಯುತ್ತಾರೆ ?

36. ತಗಡೂರು ರಾಮಚಂದ್ರರಾಯರು ಮಾಡಿದ ಎರಡು ಪ್ರಮುಖ ಕಾರ್ಯಗಳು ಯಾವುವು ?

37. ಶಾಸ್ತ್ರೀಯರ ಸೊಸೆಯ ಬಗ್ಗೆ ಊರಿನವರು ಆಡಿದ ಮಾತುಗಳಾವುವು ?

38. ತೀ.ನಂ.ಶ್ರೀಯವರು ಗಾಂಧಿಜೀಯವರನ್ನು 'ಪವಾಡ ಪುರುಷ' ಎಂದು ಕರೆಯಲು ಕಾರಣವೇನು ?

39. ಬಾಲೆ ತನ್ನ ತವರು ಮನೆಯನ್ನು ಯಾವ ಮಾತುಗಳಿಂದ ಬಳೆಗಾರನಿಗೆ ವರ್ಣಿಸಿದ್ದಾಳೆ ?

40. ಬಳೆಗಾರ ಬಾಲೆಗೆ 'ನಿನ್ನ ತವರೂರನ್ನು ತೋರು ಬಾ' ಎಂದು ಹೇಳಲು ಕಾರಣವೇನು ?

41. ಶಾರದಾ ಸಖಿ ಈಶ ಯಾರನ್ನು ಕಂಡು ಬೆರಗಾಗಿದ್ದಾರೆ ?

42. ಶಾಂತಾದೇವಿ ಕೆ. ಸಾಬಾದಿಯವರು ಧ್ಯಾನದ ಮಹತ್ವವನ್ನು ಯಾವ ಮಾತುಗಳಿಂದ ವಿವರಿಸಿದ್ದಾರೆ ?

43. ಹಡಗನ್ನು ಸಂಕ್ಷಿಪ್ತವಾಗಿ ಬ್ರಹ್ಮಾಂಡವೆಂದು ವಿ.ಕೃ. ಗೋಕಾಕರು ಏಕೆ ಕರೆದಿದ್ದಾರೆ ?

44. ಭರತ ಚಕ್ರವರ್ತಿ ಇತರರಿಗಿಂತ ಭಿನ್ನನಾಗಿದ್ದ ಎಂಬುದನ್ನು ಕವಿ ರತ್ನಾಕರವರ್ಣಿ ವರ್ಣಿಸಿದ ಬಗೆ ಹೇಗೆ ?

ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭವನ್ನು ಕೃತಿ, ಕರ್ತೃ ಸಹಿತ ವಿವರಿಸಿ : 4 × 3 = 12

45. "ಭರತಕುಮಾರ, ನಾನು ಈ ನೆಲದಲ್ಲಿ ಅಡಗಿ ಹೋಗಿದ್ದೇನೆ."

46. "ಕರ್ನಾಟಕದ ಕೀರ್ತಿಧ್ವಜವನ್ನು ನಭದೆತ್ತರಕ್ಕೆ ಎತ್ತಿ ಹಿಡಿದಿದ್ದಾರೆ."

47. "ಕೋಣೆಯನು ಮನೆಯೆಂದು ತಿಳಿದು ಬನ್ನಿ."

48. ‘‘ತುಂಬಲಿಲ್ಲವೆ ಬಡವರ ಬಸಿರು.’’

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

______________________________________________

49. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 1 × 3 = 3

ಕಾಲನ ದೂತರು ______________________________

______________________________________________

______________________________________________

__________________________________ಸುಳಿಗೆ ಸಿಕ್ಕಲು ಬೇಡಿ ||

ಅಥವಾ

ಪಂಪ ಮಹಾಚಲ ______________________________

______________________________

______________________________

______________________________ಹರಿಹರನ ಝುರಿ.

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ಪೂರ್ಣಿಮಾಳು ಲಕ್ಷ್ಮಣಿಗೆಯ ಸ್ವರೂಪವನ್ನು ಹೇಗೆ ಕಂಡುಕೊಂಡಳು ?

— ಪ್ರತಿ ವರ್ಷ ಜಲಮಟ್ಟ ಕುಸಿಯಲು ಕಾರಣಗಳಾವುವು ?

— ಭರತಕುಮಾರ ಚಿನ್ನದ ಕೋಲಿನ ಸಹಾಯದಿಂದ ತನ್ನ ತಾಯಿಯನ್ನು ಹೇಗೆ ಹುಡುಕಿದನು ? ವಿವರಿಸಿ.

50.

51.

52. ಈ ಕೆಳಗಿನ ಪ್ರಶ್ನೆಗಳಲ್ಲಿ ಒಂದನ್ನು ಕುರಿತು 5-6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಆಧುನಿಕ ಕವಿಗಳನ್ನು ಎಚ್.ಎಸ್. ವೆಂಕಟೇಶಮೂರ್ತಿಯವರು ಪ್ರಕೃತಿಯೊಂದಿಗೆ ಹೇಗೆ ಸಮ್ಮಿಲನಗೊಳಿಸಿದ್ದಾರೆ ?

— ದೇಹವನ್ನು 'ಅಚ್ಚು ಮುರಿದ ಹಾಳು ಬಂಡಿ' ಎಂದು ಶಾಂತಾದೇವಿ ಕೆ. ಸಾಬಾದಿಯವರು ಕರೆಯಲು ಕಾರಣವೇನು ?

53. — ನೀವು ಕುಮುಟಾ ತಾಲ್ಲೂಕು ಮೂರೂರಿನ ಸರ್ಕಾರಿ ಪ್ರೌಢ ಶಾಲೆಯ 10ನೇ 'ಸಿ' ವಿಭಾಗದ ಶಿಕ್ಷಣಾರ್ಥಿ ವಿಷ್ಣುಭಟ್ / ಅನನ್ಯ ಎಂದು ಭಾವಿಸಿ ಸೂಕ್ತ ಕಾರಣ ನೀಡಿ ವರ್ಗಾವಣೆ ಪತ್ರ ನೀಡುವಂತೆ ಶಾಲಾ ಮುಖ್ಯೋಪಾಧ್ಯಾಯರಿಗೆ ಅರ್ಜಿ ಬರೆಯಿರಿ. $1 \times 5 = 5$

ಅಥವಾ

— ವಾರ್ಷಿಕ ಪರೀಕ್ಷೆಗೆ ನೀವು ಮಾಡಿಕೊಳ್ಳುತ್ತಿರುವ ಸಿದ್ಧತೆಗಳನ್ನು ಕುರಿತು ಮೈಸೂರಿನ ಸರಸ್ವತಿ ಪುರದಲ್ಲಿ ವಾಸವಾಗಿರುವ ನಿಮ್ಮ ಅಣ್ಣ ಗಿರೀಶ್‌ನಿಗೆ ಪತ್ರ ಬರೆಯಿರಿ.

54. ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : 1 × 5 = 5

— ದೂರದರ್ಶನದ ಉಪಯೋಗಗಳು

— ವರದಕ್ಷಿಣೆ

— ಕ್ರೀಡೆಗಳು